Sri R. NAGAN GOUDA.—The Government has agreed to spend 30 lakhs on this water scheme for the factory. May I know what is the Government money involved in this factory ?

Mr. SPEAKER.—That is beyond the scope of the main question.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಅಲ್ಯುಮಿನಿಯಂ ಫ್ಯಾಕ್ಟರಿಯ ಮಾಲೀಕರಿಗೆ ಕೆಲವು ಷರತ್ತುಗಳನ್ನು ಹಾಕಿ, ಅವರು ಆ ಹಣವನ್ನು ವಾಪಸ್ಸು ಕೊಡಬೇಕೆಂದು ಒಪ್ಪಂದ ಮಾಡಿಕೊಂಡಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆ ಷರತ್ತುಗಳು ಏನು, ಎಷ್ಟು ದಿವಸಗಳಲ್ಲಿ ಆ ಹಣವನ್ನು ವಾಪಸ್ಸು ಕೊಡಬೇಕೆಂದು ಷರತ್ತಿನಿಂದ ಗೊತ್ತಾಗುತ್ತದೆ ?

ಶ್ರೀ ಕೆ. ಲಕ್ಕಪ್ಪ. —ಅದಕ್ಕೆ ನೋಟೀಸ್ ಕೊಟ್ಟರೆ ವಿವರವನ್ನು ಓದಗಿಸುತ್ತೇನೆ.

Sri C. K. RAJAIAH SETTY.—May I know the quantum of water required by the industry and water that is stored in the dam ?

ಶ್ರೀ ಕೆ. ಲಕ್ಕಪ್ಪ.—ಒಂದು ದಿವಸಕ್ಕೆ ಕೊನೆಯ ಪಕ್ಷ ಒಂದು ಮಿಲಿಯನ್ ಗ್ಯಾಲನ್ ನೀರು ಕೊಡಬೇಕೆಂದು ಒಪ್ಪಂದವಾಗಿದೆ. ಅದನ್ನು ಕೊಡುವುದಕ್ಕೆ ಸಾಕಷ್ಟು ವ್ಯವಸ್ಥೆಯನ್ನು ಮಾಡಿ ಕೊಂಡಿದೆ. ಅಗ್ರಿಮೆಂಟ್ ಪ್ರಕಾರ ಕೊಡತಕ್ಕ ವ್ಯವಸ್ಥೆ ಮಾಡಿದೆ.

Sri H. N. NANJE GOWDA.—The Minister was pleased to say that they have entered into an agreement regarding terms and conditions. Would the Government lay a copy of the agreement on the Table of the House ?

ಶ್ರೀ ಕೆ. ಲಕ್ಕಪ್ಪ.—ಟೇಬಲ್ ಮೇಲೆ ಇಡುವಂಥಾದ್ದಾದರೆ ಇಡುತ್ತೇವೆ. ಟೇಬಲ್ ಮೇಲೆ ಇಡುವುದಕ್ಕೆ ಆಗದೇ ಇರುವಂಥಾದ್ದಾದರೆ ಅದನ್ನು ಇಡುವುದಕ್ಕೆ ಆಗುವುದಿಲ್ಲ.

Mr. SPEAKER.—If there is nothing confidential about it, the agreement may be placed on the Table.

Abolition of Land Revenue

138. Sri H. N. NANJE GOWDA (Arkalgud).—

Will the Minister for Revenue be pleased to state :—

(*a*) whether they have sought the advice of the Planning Commission or Government of India in regard to the desirability or otherwise of the 'Abolition of Land Revenue' ;

(*b*) if so, the advice tendered by them ;

(*c*) the reaction of the State Government on the advice so tendered ?

A.—Sri H. V. KOUJALGI (Minister for Revenue).—

(*a*) No.

(*b*) and (*c*) Do not arise in view of reply to question (*a*) above.

ಶ್ರೀ ಹೆಚ್. ಎನ್. ನಂಜೇಗೌಡ.—ಹಿಂದೆ ಇದೇ ಸಭೆಯಲ್ಲಿ ಎಂದರೆ ಜನವರಿ ಅಥವಾ ಮಾರ್ಚ್ ತಿಂಗಳಲ್ಲಿ ಯೋಜನಾ ಆಯೋಗಕ್ಕೆ ಹಾಗೂ ಕೇಂದ್ರ ಸರಕಾರಕ್ಕೆ ಲ್ಯಾಂಡ್ ರೆವಿನ್ಯೂ ರದ್ದು ಮಾಡುವ ಬಗ್ಗೆ ಸಲಹೆಗಳನ್ನು ಕಳುಹಿಸಿರಲಿಲ್ಲವೇ ?

Sri H. V. KOUJALGI.—According to my information no such advice has been sent.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—1967 ರಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪ್ರಣಾಳಿಕೆಯಲ್ಲಿ ಭೂಕಂದಾಯವನ್ನು ರದ್ದುಮಾಡುತ್ತೇವೆ ಎಂದು ಇದೇ ಸರಕಾರ ಪ್ರಚಾರಮಾಡಿತ್ತು. ಹಾಗೆ ಪ್ರಚಾರ ಮಾಡಿದ ಮಾತನ್ನು ಕಾರ್ಯಗತಮಾಡಿದೆಯೇ ?

Sri H. V. KOUJALGI.—Government at one time thought that land revenue in its present form should be abolished, but subsequently they have changed their opinion. When they have changed the opinion the Hon. Minister for Finance has made a statement on that on more than one occasion on the floor of this House.

ಶ್ರೀ ಬಿ. ಪಿ. ಗಂಗಾಧರ್.—ಎಕ್ಸ್‌ಚೆಕ್ವರ್ ಬಾಬಿನಲ್ಲಿ ಸರಕಾರಕ್ಕೆ ಸುಮಾರು 18 ಕೋಟಿಯಷ್ಟು ವರಮಾನ ಬಂದಿರುವುದರಿಂದ ಲ್ಯಾಂಡ್ ರೆವೆನ್ಯೂವನ್ನು ಈಗ ಕೈಬಿಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಇಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ಭೂಕಂದಾಯವನ್ನು ವಸೂಲು ಮಾಡಲು ಸುಮಾರು ಶೇಕಡಾ 40ರಷ್ಟು ಖರ್ಚು ಸರಕಾರಕ್ಕೆ ಬರುತ್ತಿರುವುದರಿಂದ ಈಗಿರುವ ಭೂಕಂದಾಯವನ್ನು ರದ್ದು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಹೆಚ್. ವಿ. ಕೌಜಲಗಿ.—ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಭೂಕಂದಾಯವನ್ನು ರದ್ದುಮಾಡಿ ಕೃಷಿಆದಾಯ ತೆರಿಗೆಯನ್ನು ಹೇರಬೇಕು ಎನ್ನುವ ಪ್ರಶ್ನೆ ಬಗ್ಗೆ ಕಾಂಗ್ರೆಸ್ಸಿನ ಸಂಸದೀಯ ಪಕ್ಷದಲ್ಲಿ ಚರ್ಚೆಯಾಗಿ, ಇದರಿಂದ ತೊಂದರೆಯಾಗುತ್ತದೆ ಎಂದು ಹೇಳಿ ಕಾಂಗ್ರೆಸ್ಸು ಪಕ್ಷದವರೇ ಇದನ್ನು ಕೈಬಿಟ್ಟರೇ ಹೇಗೆ ?

Mr. SPEAKER.—Hon'ble Member's supplementary pertains to a decision taken by the Lok Sabha Parliamentary Party. How can the Minister reply to that here ?

ಶ್ರೀ ಎಸ್. ಗೋಪಾಲಗೌಡ.—ಒಂದು ಕಾಲದಲ್ಲಿ ಸರಕಾರದವರು ಕಂದಾಯ ಈಗಿರುವ ರೀತಿಯಲ್ಲಿ ಇರಬಾರದು ಎಂದು ಹಿಂದೆ ಇದೇ ಸಭೆಯಲ್ಲಿ ಹೇಳಿದ್ದರು. ಇದಾದನಂತರ ಇದನ್ನು ಬದಲಾವಣೆ ಮಾಡಬೇಕು ಎಂದು ನಿರ್ಣಯಮಾಡಲು ಇದ್ದಂತಹ ಕಾರಣಗಳೇನು ?

ಶ್ರೀ ಹೆಚ್. ವಿ. ಕೌಜಲಗಿ.—ಇವನ್ನು ತೆಗೆದು ಅಗ್ರಿಕಲ್‌ಚರಲ್ ಇನ್‌ಕಂ ಟಾಕ್ಸ್ ಹಾಕಬೇಕು ಎಂದು ಸರಕಾರದಲ್ಲಿ ಒಂದು ವಿಚಾರ ಇತ್ತು. ಆದರೆ ಅನೇಕ ಕಡೆಗಳಿಂದ ಈಗಿರುವಂತೆಯೇ ಇರಬೇಕು ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಹಾಕಿದರೆ ಅದರಿಂದ ಜನರಿಗೆ ತೊಂದರೆಯಾಗುತ್ತದೆ ಎಂದು ಅಭಿಪ್ರಾಯಗಳು ಬಂದವು ಮತ್ತು ಇದನ್ನು ಬದಲಾವಣೆ ಮಾಡಕೂಡದು ಎನ್ನುವ ಮನವಿಗಳು ಸರಕಾರಕ್ಕೆ ಬಂದು ಅದು ಮನವರಿಕೆಯಾಗಿ ಸರಕಾರ ಇದನ್ನು ಬಿಟ್ಟು ಈಗಿನ ಪದ್ಧತಿಯನ್ನೇ ಮುಂದುವರಿಸಿದೆ.

ಶ್ರೀ ಬಿ. ಪಾಟೀಲ್.—ಈಗ ಇರತಕ್ಕ ಕಂದಾಯದ ಪದ್ಧತಿಯಲ್ಲಿ ಅನೇಕ ಸೆಸ್‌ಗಳು ಸೇರಿರುತ್ತವೆ. ಅವರಿಂದ ಈ ಪದ್ಧತಿಯನ್ನು ತೆಗೆದುಹಾಕಿ ಇನ್ನೊಂದು ಹೊಸ ಪದ್ಧತಿಯನ್ನು ತರತಕ್ಕ ವಿಚಾರ ಏನಾದರು ಸರಕಾರದವರ ಪರಿಶೀಲನೆಯಲ್ಲಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಸದ್ಯಕ್ಕೆ ಅಂಥಾ ಯೋಚನೆಯಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—1967ನೆಯ ಮಹಾ ಚುನಾವಣೆಯ ಪ್ರಣಾಳಿಕೆಯಲ್ಲಿ ಆಳುವ ಪಕ್ಷದವರು ಈ ಕಂದಾಯವನ್ನು ರದ್ದುಪಡಿಸುವುದಾಗಿ ಖಡಾಖಡಿಯಲ್ಲಿ ಹೇಳಿಕೆ ಕೊಟ್ಟು ಈಗ ಓಟನ್ನು ಪಡೆದ ನಂತರ ಅದನ್ನು ತೆಗೆದುಹಾಕುವುದಿಲ್ಲ ಎಂದರೆ ಅದು ಜನರನ್ನು ಮೋಸ ಮಾಡಿದಂತೆ ಆಗುವುದಿಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಹಾಗೇನೂ ಆಗುವುದಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ.—ಅನೇಕ ಕಡೆಗಳಿಂದ ಅನೇಕ ಜನರಿಂದಲೂ ಹಾಗೂ ರೈತರಿಂದಲೂ ಸರ್ಕಾರಕ್ಕೇನಾದರೂ ಹಾಲಿ ಇರತಕ್ಕ ಕಂದಾಯವನ್ನು ರದ್ದುಮಾಡಬಾರದು ಎಂಬುದಾಗಿ ಮನವಿಗಳೇನಾದರೂ ಬಂದಿವೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಹಾಗೆ ಅನೇಕ ಮನವಿಗಳು ಬಂದಿವೆ.

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಮಂತ್ರಿಗಳು ಅನೇಕ ಕಡೆಗಳಿಂದ ಮನವಿಗಳು ಬಂದಿವೆ ಎಂಬುದಾಗಿ ಉತ್ತರ ಕೊಟ್ಟಿದ್ದಾರೆ. ಆ ಮನವಿಗಳೇನು ಶಾಸನ ಸಭಾ ಸದಸ್ಯರಿಂದಲೋ—ಸಾಮಾನ್ಯ ಜನರಿಂದಲೋ ಅಥವಾ ರಾಜಕೀಯ ವ್ಯಕ್ತಿಗಳಿಂದಲೋ ಯಾರಿಂದ ಬಂದಿವೆ ?

ಶ್ರೀ ಎಚ್. ವಿ. ಕೌಜಲಗಿ.—ಎಲ್ಲ ಕಡೆಗಳಿಂದಲೂ ಎಲ್ಲ ಜನರಿಂದಲೂ ಬಂದಿವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಮ್ಮ ರಾಜ್ಯದ 19 ಜಿಲ್ಲೆಗಳಲ್ಲಿ 17 ಜಿಲ್ಲೆಗಳಲ್ಲಿ ಅನಾವೃಷ್ಟಿಯೂ ಮತ್ತು ಇನ್ನುಳಿದ ಎರಡು ಜಿಲ್ಲೆಗಳಲ್ಲಿ ಅತಿವೃಷ್ಟಿಯೂ ಆಗಿ ಬೆಳೆಗಳೆಲ್ಲಾ ಹೋಗಿರುವುದರಿಂದ ಈ ವರ್ಷ ಎಲ್ಲೆಲ್ಲೂ ಕೋರಾಹಲ ಎದ್ದಿರುವುದರಿಂದ ಕಂದಾಯವನ್ನು ಈ ವರ್ಷವಾದರೂ ತಾತ್ಕಾಲಿಕವಾಗಿ ರದ್ದು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಎಲ್ಲೆಲ್ಲಿ ಪೀಕು ಬಂದಿಲ್ಲವೋ ಅಲ್ಲಿ ಕಂದಾಯ ಸಸ್ಪೆಂಡ್ ಮಾಡುವುದಕ್ಕೆ, ರಿಮಿಷನ್ ಕೊಡುವುದಕ್ಕೆ ಕಾನೂನಲ್ಲಿ ಅವಕಾಶವಿದೆ.

ಶ್ರೀ ವಿ. ಎನ್. ಪಾಟೀಲ್.—ಸರ್ಕಾರಕ್ಕೆ ಕಂದಾಯವನ್ನು ರದ್ದುಮಾಡಬೇಡಿ ಎಂದು ಮನವಿಗಳನ್ನು ಕಳುಹಿಸಿರತಕ್ಕ ಸಂಘ ಸಂಸ್ಥೆಗಳು ಯಾವುವು ಎಂಬುದನ್ನು ತಿಳಿದುಕೊಳ್ಳಲು ಆ ವಿವರವನ್ನು ಈ ಹೌಸಿನ ಟೇಬಲ್ ಮೇಲೆ ಇಡಲಾಗುತ್ತದೆಯೇ ?

Mr. SPEAKER.—The Hon'ble Minister has already stated that representations have come from all sources.

Sri V. N. PATIL.—My question is specific !

Mr. SPEAKER.—The Hon'ble Minister may reply.

Sri H. V. KOUJALGI.—If the Chair directs, I will look into the records and place the information on the Table of the House.

ಶ್ರೀ ಬಿ. ಪರಮೇಶ್ವರಪ್ಪ.—ಸರ್ಕಾರದವರು ಒಂದು ಸಾರ್ವಿ ಕಂದಾಯವನ್ನು ವಸೂಲ್ಮಾಡಬೇಡಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದರು. ಈಗ ಮತ್ತೆ ಅವರಿಗೆ ಕಂದಾಯವನ್ನು ವಸೂಲ್ಮಾಡಿ ಎಂದ ಹೇಳಿರುವುದರಿಂದ ಅವರಿಗೆ ಅದನ್ನು ವಸೂಲು ಮಾಡಲು ಎಷ್ಟು ಕಷ್ಟವುಂಟಾಗಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ? ಅಧಿಕಾರಗಳಲ್ಲಿ ಜಿಗುಪ್ಸೆ ಆಗಿಲ್ಲವೆ ?

ಶ್ರೀ ಎಚ್. ವಿ. ಕೌಜಲಗಿ.—ಹಾಗೆ ಕಂದಾಯವನ್ನು ರದ್ದುಮಾಡುತ್ತೇವೆಂದು ಯಾವಾಗಲೂ ಹೇಳಿಲ್ಲ.

1.30 P. M.

Drinking Water to Bijapur City

140. Sri S. M. GUREDDI (Muddebihal).—

Will the Minister for Labour be pleased to state :—

(*a*) whether it has come to their notice that there will be shortage of drinking water in Bijapur City during summer ;

(*b*) whether the proposal to supply water to Bijapur City from Krishna River to overcome the shortage of drinking water permanently is under the consideration of the Government ?

A.— Sri K. PUTTASWAMY (Minister for Labour).—

(*a*) Yes.

(*b*) Yes.